# ಕರ್ನಾಟಕ ಸರ್ಕಾರ

ಆಯುಕ್ತರ ಕಚೇರಿ,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳ ಇಲಾಖೆ.
ಕೆ.ಆರ್. ವೃತ್ತ, ಬೆಂಗಳೂರು-560001.
ದೂರವಾಣಿ : 91-080-22212408
ಫ್ಯಾಕ್ಸ್ : 91-080-22277528

ಸಂಖ್ಯೆ: ತಾಂ.ಪ.ಭೂ.ಘಟಕ.52/2008-09 ದಿನಾಂಕ: 26.3.2009.

## ಸುತ್ತೋಲೆ

ವಿಷಯ : 'ತತ್ಕಾಲ್ ಪೋಡಿ ಯೋಜನೆ' ಯ ಅಡಿಯಲ್ಲಿ ಅರ್ಜಿಗಳನ್ನು ಸ್ವೀಕರಿಸುವ ಹಾಗೂ ವಿಲೇಪಡಿಸುವ ಬಗ್ಗೆ ಮಾರ್ಗಸೂಚನೆಗಳು.

ಉಲ್ಲೇಖ:
1) ಸರ್ಕಾರದ ಆದೇಶದ ಸಂಖ್ಯೆ: ಕಂಇ.142.ಭೂದಾಸ 2008 ದಿನಾಂಕ: 12.8.2008 ಮತ್ತು 23.8.2008.
2) ಈ ಕಛೇರಿಯ ಸಮಸಂಖ್ಯೆ ಸುತ್ತೋಲೆ ದಿನಾಂಕ 4.10.2008.

*****

ಈ ಕಛೇರಿಯಿಂದ ಉಲ್ಲೇಖ (2) ರಲ್ಲಿ ನಮೂದಿಸಿರುವ ದಿನಾಂಕದ ಸುತ್ತೋಲೆಯ ಕಡೆ ಎಲ್ಲಾ ಅಧಿಕಾರಿಗಳ ಗಮನ ಸೆಳೆಯಲಾಗಿದೆ. ಈ ಸುತ್ತೋಲೆಯಲ್ಲಿ ನೀಡಿರುವ "7 ದಿನಗಳು ಮುಂಚಿತವಾಗಿ ನೋಟೀಸನ್ನು ಸರ್ಟಿಫಿಕೇಟ್ ಅಫ್ ಪೋಸ್ಟಿಂಗ್ ಮೂಲಕ ನೀಡಿ" ಎಂದು ನೀಡಿರುವ ನಿರ್ದೇಶನವನ್ನು ಬಹುತೇಕ ಎಲ್ಲಾ ಅಧಿಕಾರಿಗಳು ಸರಿಯಾಗಿ ಅರ್ಥೈಸಿಕೊಳ್ಳದೇ ಇರುವುದು ವಿಷಾಧನೀಯ ಸಂಗತಿ. ನೋಟೀಸನ್ನು ಜಾರಿ ಮಾಡಿರುವ ಬಗ್ಗೆ ದೃಢೀಕೃತ ಮಾಹಿತಿಯು ಅಂಚೆ ಇಲಾಖೆಯು ನೀಡುವ ಸರ್ಟಿಫಿಕೇಟ್ ಅಫ್ ಪೋಸ್ಟಿಂಗ್ ದ್ವಾರ ಖಚಿತಪಡಿಸಿಕೊಳ್ಳಲು ಈ ನಿರ್ದೇಶನವನ್ನು ನೀಡಲಾಗಿತ್ತು. ತತ್ಕಾಲ್ ಪೋಡಿ ಸಂಬಂಧ ಅರ್ಜಿದಾರರು ಅಥವಾ ಬಾಧಿತದಾರರುಗಳು ತಾವು ಇಚ್ಛಪಟ್ಟು ನೋಟೀಸುಗಳನ್ನು ಮುದ್ದಾಂ ಪಡೆಯಲು ಇಚ್ಛಿಸಿದಲ್ಲಿ ನೋಟೀಸುಗಳನ್ನು ಮುದ್ದಾಂ ಆಗಿ ಜಾರಿ ಮಾಡಲು ಕಾನೂನಿನಲ್ಲಿ ಯಾವುದೇ ತೊಡಕಿರುವುದಿಲ್ಲ. ಆದ್ದರಿಂದ ಮುಂದುವರೆದು ಸೂಚಿಸುವುದೇನೆಂದರೆ, ಸಂಬಂಧಪಟ್ಟ ತತ್ಕಾಲ್ ಅರ್ಜಿದಾರರು ಅಥವಾ ಬಾಧಿತದಾರರು ನೋಟೀಸನ್ನು ಮುದ್ದಾಂ ಪಡೆಯಲು ಇಚ್ಛೆಪಟ್ಟಲ್ಲಿ ಅದರಂತೆ ಜಾರಿ ಮಾಡುವುದು.

ದಿನಾಂಕ 4.10.2008 ರ ಸುತ್ತೋಲೆಯಲ್ಲಿ ನೀಡಿರುವ ಇತರೆ ನಿರ್ದೇಶನಗಳನ್ನು ಯಥಾವತ್ತಾಗಿ ಪಾಲಿಸುವುದು. ಅವುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

(ಸಹಿ)
ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳ ಇಲಾಖೆ, ಬೆಂಗಳೂರು

ಪ್ರತಿಯನ್ನು:-

1) ಎಲ್ಲಾ ವಿಭಾಗದ ಪ್ರಾದೇಶಿಕ ಆಯುಕ್ತರುಗಳಿಗೆ ಮಾಹಿತಿಗಾಗಿ.
2) ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
3) ಎಲ್ಲಾ ಉಪವಿಭಾಗಾಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4) ಎಲ್ಲಾ ತಹಶೀಲ್ದಾರ್‌ಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
5) ಪ್ರಾಚಾರ್ಯರು, ಭೂಮಾಪನ ತರಬೇತಿ ಸಂಸ್ಥೆ ಮೈಸೂರು / ಗುಲ್ಬರ್ಗಾ ರವರುಗಳಿಗೆ ಮಾಹಿತಿಗಾಗಿ.
6) ಕೇಂದ್ರಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
7) ಈ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
8) ಕೇಂದ್ರಕಛೇರಿಯ ಎಲ್ಲಾ ಶಾಖೆಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
9) ಅಧ್ಯಕ್ಷರು, ಕರ್ನಾಟಕ ರಾಜ್ಯ ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಕಾರ್ಯನಿರ್ವಾಹಕರ ಸಂಘ, ಬೆಂಗಳೂರು.

(ಸೈಯದ್ ಇಲಿಯಾಸ್ [illegible])
ಭೂದಾಖಲೆಗಳ ಜಂಟಿ ನಿರ್ದೇಶಕರು
(ವಿಚಾರಣೆ ಮತ್ತು ತನಿಖೆ)